ಕರ್ನಾಟಕ ಸರಕಾರ

# ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ

(ಸ್ವಾಯತ್ತ ಸಂಸ್ಥೆ)

ಡಾ|| ಬಿ.ಆರ್. ಅಂಬೇಡ್ಕರ ರಸ್ತೆ, ಬೆಳಗಾವಿ-590 001, ದೂರವಾಣಿ ಸಂಖ್ಯೆ: 0831-2421464, 2421453
ಫ್ಯಾಕ್ಸ ನಂ. 0831-2403126, **Website: www.bimsbelgaum.org** **E.Mail: belgaum.bims@gmail.com**

ಸಂಖ್ಯೆ: ಬಿಮ್ಸ್/ಜಿಎನ್‌ಎಲ್/ಕೋವಿಡ್-19/5/2021-22 /H2H ದಿನಾಂಕ: 26-05-2021

## ಅಧಿಕೃತ ಜ್ಞಾಪನಾ ಪತ್ರ

ವಿಷಯ: ಕರೋನಾ-19 ಸಾಂಕ್ರಾಮಿಕ 2ನೇ ಅಲೆಯ ನಿಯಂತ್ರಣಕ್ಕಾಗಿ ಅವಶ್ಯವಿರುವ Research Assistant ರನ್ನು ಗುತ್ತಿಗೆ ಒಪ್ಪಂದದ ಮೇಲೆ 6 ತಿಂಗಳ ಅವಧಿಗೆ ತಾತ್ಕಾಲಿಕ ನೇಮಕಾತಿ ಕುರಿತು.

ಉಲ್ಲೇಖ: 1) ಈ ಕಾರ್ಯಾಲಯದ ಪತ್ರ ಸಂಖ್ಯೆ/ಬಿಮ್ಸ/ಜಿಎನ್‌ಎನ್/ಕೋವಿಡ್-19/05/2021-22 ದಿನಾಂಕ-30-04-2021

2) ಸರ್ಕಾರದ ಆದೇಶ ಸಂ. ಎಂಇಡಿ 165 ಎಂಎಸ್‌ಎಫ್ 2020, ಬೆಂಗಳೂರು ದಿನಾಂಕ: 01-06-2020.

3) ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಆದೇಶ ಸಂಖ್ಯೆ/ಎಮ್.ಎಫ್.ಎಲ್./ ಸಿಆರ್/09/2021-22 ದಿನಾಂಕ;-21/05/2021

********

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ 3 ರನ್ವಯ ಜಿಲ್ಲೆಯಲ್ಲಿ ಉಲ್ಬಣಗೊಂಡಿರುವ ಕೋವಿಡ್-19 ಸಾಂಕ್ರಾಮಿಕ ರೋಗ 2ನೇ ಅಲೆಯ ನಿಯಂತ್ರಣಕ್ಕಾಗಿ ಕೇವಲ 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಲಾಗಿದೆ. ಅದರಂತೆ ಈ ಕೆಳಗೆ ಕಾಣಿಸಿದವರಿಗೆ Research Assistant ರನ್ನಾಗಿ ಗುತ್ತಿಗೆ ಒಪ್ಪಂದದ ಮೇಲೆ 6 ತಿಂಗಳ ಅವಧಿಗೆ ಅಥವಾ ಈ ಕಚೇರಿ ಮುಂದಿನ ಆದೇಶದ ಮೇರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ತಾತ್ಕಾಲಿಕವಾಗಿ ಸಂಚಿತ ವೇತನದಲ್ಲಿ ನೇಮಕಾತಿ ಮಾಡಿದೆ.

| ಕ್ರ ಸಂ. | ಅಭ್ಯರ್ಥಿಗಳ ಹೆಸರು ವಿಳಾಸ | ಕೆಟಗರಿ | ಮಾಹೆಯಾನ ನಿಗದಿತ ವೇತನ |
|---|---|---|---|
| 1 | SUNIL TADAKOD<br>NAVODAYA NAGAR KARNATAKA UNIVERSITY<br>DHARWAD-580003 | GM | Rs. 40,000/- |

ನೇಮಕಾತಿಗೊಳಿಸಲಾದ ಅಭ್ಯರ್ಥಿಯು ಆದೇಶ ತಲುಪಿದ 3 ದಿನಗಳಲ್ಲಿ ರೂ. 100 ಛಾಪಾ ಕಾಗದದಲ್ಲಿ ಷರತ್ತು ಮತ್ತು ನಿಬಂಧನೆಗಳನ್ವಯ ನೇಮಕಾತಿ ಒಪ್ಪಿಕೊಂಡ ಬಗ್ಗೆ ಮೂಲದಾಖಲಾತಿಗಳೊಂದಿಗೆ ಪ್ರತಿಜ್ಞಾ ವಿಧಿಯನ್ನು ನಿರ್ದೇಶಕರು, ಬಿಮ್ಸ್, ಬೆಳಗಾವಿ ಇವರಿಗೆ ಸಲ್ಲಿಸುವುದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಸದರಿ ನೇಮಕಾತಿ ಆದೇಶವು ರದ್ದಾಗುವುದು. ಮೂಲ ದಾಖಲಾತಿಗಳ ಪರಿಶೀಲನೆ ವೇಳೆ ಯಾವುದೇ ಆಕ್ಷೇಪಣೆಗಳು ಉದ್ಭವವಾದಲ್ಲಿ ನೇಮಕಾತಿ ಆದೇಶ ತನ್ನಿಂತಾನೆ ರದ್ದಾಗುವುದು. ನೇಮಕಾತಿ ಹೊಂದಿದ ಸಿಬ್ಬಂದಿಯವರು ಕಡ್ಡಾಯವಾಗಿ ಕೋವಿಡ್-19 ನಿರ್ವಹಣೆ ಕಾರ್ಯದಲ್ಲಿ ಕಾರ್ಯನಿರ್ವಹಿಸುವುದು. ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವದು ಕಡ್ಡಾಯವಾಗಿದೆ.

1) ದೈಹಿಕ ಧಾರ್ಡತಾ ಪ್ರಮಾಣ ಪತ್ರ
2) ಇಬ್ಬರು ಗಣ್ಯ ವ್ಯಕ್ತಿಗಳಿಂದ ನಡತೆ ಪ್ರಮಾಣ ಪತ್ರ
3) ಎಲ್ಲ ಮೂಲ ದಾಖಲೆಗಳ ಒಂದು ಸೆಟ್ ಝರಾಕ್ಸ್ ಪ್ರತಿ.

ಮೇಲ್ಕಾಣಿಸಿದ ಅಭ್ಯರ್ಥಿಯು ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ಬಿಮ್ಸ್, ಬೆಳಗಾವಿ ಇವರಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಅವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು.

ಆಯ್ಕೆಯಾದ ಅಭ್ಯರ್ಥಿಗಳು 6 ತಿಂಗಳ ಸೇವಾ ಅವಧಿ ಮುಗಿದ ನಂತರ ತಮ್ಮ ಸೇವೆಯನ್ನು ಮುಂದುವರೆಸಲು ಮನವಿ ಸಲ್ಲಿಸತಕ್ಕದ್ದಲ್ಲ ಹಾಗೂ ಈ ಕುರಿತು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ ಎಂಬ ಷರತ್ತಿಗೊಳಪಟ್ಟು ಈ ನೇಮಕಾತಿ ಆದೇಶ ನೀಡಲಾಗಿದೆ. ವೇತನಕ್ಕೆ ತಗಲುವ ವೆಚ್ಚವನ್ನು ರಾಜ್ಯ ವಿಪತ್ತು ಪರಿಹಾರನಿಧಿಯಲ್ಲಿ ಭರಿಸುವುದು.

ನೇಮಕಾತಿ ಷರತ್ತುಗಳು :-

1) ಈ ನೇಮಕಾತಿಯು ಕೇವಲ 6 ತಿಂಗಳ ಅವಧಿಗೆ ಮಾತ್ರ ಅಥವಾ ಜಿಲ್ಲಾಧಿಕಾರಿಗಳ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಸೀಮಿತವಾಗಿದೆ.

2) ಈ ನೇಮಕಾತಿಯು ಖಾಯಂ ನೇಮಕಾತಿಗಾಗಲೀ ವಿಶ್ರಾಂತಿ ವೇತನಕ್ಕಾಗಲೀ ನಿವೃತ್ತ ಉಪದಾನ, ವೇತನ ಶ್ರೇಣಿ ಅಥವಾ ಇನ್ನಿತರ ಯಾವುದೇ ಭತ್ತೆಗಳನ್ನು ಪಡೆಯಲು ಹಕ್ಕನ್ನು ಹೊಂದಿರುವದಿಲ್ಲ ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.

3) ನೇಮಕಾತಿಯು ನಿರ್ದಿಷ್ಟ ಪಡಿಸಿದ ಸ್ಥಳಕ್ಕೆ ಇರುವದರಿಂದ ಬೇರೆ ಸ್ಥಳಕ್ಕೆ ವ ನಿಯೋಜನೆಗಾಗಿ ಅವಕಾಶ ಇರುವದಿಲ್ಲ.

4) ಕೆಲಸಕ್ಕೆ ಹಾಜರಾಗುವಾಗ ಎಲ್ಲ ಮೂಲ ದಾಖಲೆಗಳನ್ನು ಅಂದರೆ ವಿದ್ಯಾರ್ಹತೆ, ಅಂಕಪಟ್ಟಿ ಜನ್ಮ ದಿನಾಂಕ ದಾಖಲೆ ಇತ್ಯಾದಿಗಳನ್ನು ಸಾದರ ಪಡಿಸುವ ಕರಾರಿಗೆ ಒಳಪಟ್ಟಿದೆ. ಒಂದು ವೇಳೆ ದಾಖಲಾತಿಗಳಲ್ಲಿ ಯಾವುದೇ ಮಾಹಿತಿ ತಪ್ಪಾಗಿ ಸಲ್ಲಿಸಿರುವುದು ಕಂಡುಬಂದಲ್ಲಿ ಈ ನೇಮಕಾತಿಯು ತನ್ನಿಂತಾನೆ ರದ್ದಾಗುವುದು.

5) ಗುತ್ತಿಗೆ ಆಧಾರದ ನೇಮಕಾತಿಯು ಯಾವುದೇ ಕಾರಣವಿಲ್ಲದೆ ಅಥವಾ ಉಭಯ ಪಕ್ಷಗಳು ಒಂದು ತಿಂಗಳ ನೋಟಿಸು ಕೊಟ್ಟು ಅಥವಾ ಒಂದು ತಿಂಗಳ ಸಂಭಾವನೆ ನೀಡಿ ಪರ್ಯಾಯವಸನಗೊಳಿಸುವ ಷರತ್ತಿಗೆ ಒಳಪಟ್ಟಿದೆ.

6) ನಿಯಂತ್ರಣಾಧಿಕಾರಿಗಳು ಹಾಗೂ ಅವರ ಆಧೀನಕ್ಕೆ ಬರುವ ಅಧಿಕಾರಿಗಳು ಸೂಚಿಸುವ ಎಲ್ಲ ಕರ್ತವ್ಯ ಜವಾಬ್ದಾರಿಗಳನ್ನು ನಿರ್ವಹಿಸುವುದು.

7) ಪ್ರತಿ ತಿಂಗಳ ವೇತವನವನ್ನು ತೃಪ್ತಿಕರ ಸೇವೆಗೆ ಒಳಪಟ್ಟು ಪಾವತಿಸಲಾಗುವುದು.

**ನಿರ್ದೇಶಕರು,**
**ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ,**
**ಬೆಳಗಾವಿ.**

ರಿಗೆ,

ಮೇಲ್ಕಾಣಿಸಿದ ಅಭ್ಯರ್ಥಿಗಳಿಗೆ

ಪ್ರತಿ : ಮುಖ್ಯ ಆಡಳಿತಾಧಿಕಾರಿಗಳು/ಆರ್ಥಿಕ ಸಲಹೆಗಾರರು, ಬಿಮ್ಸ್, ಬೆಳಗಾವಿ.
ಪ್ರತಿ : ವೈದ್ಯಕೀಯ ಅಧೀಕ್ಷಕರು, ಬಿಮ್ಸ್ ಆಸ್ಪತ್ರೆ, ಬೆಳಗಾವಿ.
ಪ್ರತಿ : ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ (ಬಿಮ್ಸ್ ಬೋಧನಾ ಆಸ್ಪತ್ರೆ) ಬೆಳಗಾವಿ.
ಪ್ರತಿ : ಲೆಕ್ಕ ಪತ್ರ ವಿಭಾಗ, ಬಿಮ್ಸ್, ಬೆಳಗಾವಿ,
ಪ್ರತಿ : ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ಬಿಮ್ಸ್, ಬೆಳಗಾವಿ.

**ಪ್ರತಿ ಗೌರವಾದರಗಳೊಂದಿಗೆ ಮಾನ್ಯರ ಗಮನಕ್ಕೆ ಒಪ್ಪಿಸಿದೆ.**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), 4ನೇ ಹಂತ 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆನಂದರಾವ್ ವೃತ್ತ, ಬೆಂಗಳೂರು.
3) ಜಿಲ್ಲಾಧಿಕಾರಿಗಳು, ಬೆಳಗಾವಿ.